**JANAVAHINI BANGALORE**
**DATED: JANUARY 10 2001**

# ಅರ್ಥ್‌ನಿಂದ ಆರೋಗ್ಯ ಸಂರಕ್ಷಣಾ ಕಾರ್ಯಕ್ರಮ

**ಬೆಂಗಳೂರು, ಜ. 9:** ಬೆಂಗಳೂರು ಮೂಲದ ಸ್ವಾಥ್ಯ ಸಂಸ್ಥೆಯಾದ 'ಅರ್ಥ್'ನಿಂದ, ಸತತ ಕಂಪ್ಯೂಟರ್ ಉಪಯೋಗದಿಂದ ಕಂಡು ಬರುವ ರೋಗಗಳ ವಿಷಯದಲ್ಲಿ ಮಾಹಿತಿ ತಂತ್ರಜ್ಞಾನ ಪರಿಣಿತರಿಗೆ ಜಾಗೃತಿ ಮೂಡಿಸಲು ಕಾರ್ಯಕ್ರಮವೊಂದನ್ನು ರೂಪಿಸಲಾಗಿದೆ.

ಈ ಕಾರ್ಯಕ್ರಮದಡಿಯಲ್ಲಿ ಮಾಹಿತಿ ತಂತ್ರಜ್ಞಾನ ಪರಿಣಿತರ ತಂಡಗಳಿಗೆ ಕಂಪ್ಯೂಟರ್‌ನ ಸತತ ಉಪಯೋಗದಿಂದ ತಲೆದೋರುವ ದೃಷ್ಟಿ ಸಂಬಂಧಿ ತೊಂದರೆಗಳು, ತಲೆನೋವು, ಬೆನ್ನು ಮತ್ತು ಭುಜದ ನೋವು, ಮಾನಸಿಕ ಒತ್ತಡ, ಗ್ಯಾಸ್ ತೊಂದರೆ ಮುಂತಾದವುಗಳನ್ನು ತಪ್ಪಿಸುವ ವಿಧಾನಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

'ಅರ್ಥ್'ನಿಂದ ಆಯುರ್ವೇದ, ಯೋಗ ಮುಂತಾದ ವಿವಿಧ ಚಿಕಿತ್ಸಾ ವಿಧಾನಗಳಿಂದ ಬಹಳಷ್ಟು ಮಾಹಿತಿ ತಂತ್ರಜ್ಞಾನ ಪರಿಣಿತರಿಗೆ ಸಹಾಯವಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಈ ಸಂಬಂಧ ಲಾಭ ಪಡೆಯಲಿಚ್ಛಿಸುವ ಕಂಪ್ಯೂಟರ್ ಉದ್ಯೋಗಿಗಳು ಡಾ. ಪ್ರಶಾಂತ್/ ಡಾ. ಸಂಜಯ್ ಶರ್ಮ ಅವರನ್ನು 1142/1, 12ನೇ ಮುಖ್ಯ ರಸ್ತೆ, ಒಂದನೇ ಅಡ್ಡರಸ್ತೆ, ಎಚ್‌ಎಎಲ್ ಎರಡನೇ ಹಂತ, ಇಂದಿರಾನಗರ, ಬೆಂಗಳೂರು-560 008ರಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 5288630/5254655ರಲ್ಲಿ ಸಂಪರ್ಕಿಸಲು ಕೋರಲಾಗಿದೆ.

◆ **ಹೊಸದಿಲ್ಲಿ, ಜ. 9:** ಸ್ಪರ್ಧಾತ್ಮಕ ಬೆಲೆಗಳಲ್ಲಿ ಗುಣಮಟ್ಟದ ವಸ್ತುಗಳನ್ನು ಪೂರೈಸಲು ಉತ್ಪಾದಕರ ರಕ್ಷಣೆ ಮತ್ತು ಗ್ರಾಹಕರ ಹಿತಾಸಕ್ತಿಗಳ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವುದು ಅಗತ್ಯ ಎಂದು ಹಣಕಾಸು ಸಚಿವ ಯಶವಂತ್ ಸಿನ್ಹಾ ಅವರು ಹೇಳಿದ್ದಾರೆ.